




# ಕಾಷ್ಠ ಕಲೆಯ ಕರಾಮತ್ತು

■ ಚಿತ್ರ ಬರಹ:
ಸಿ.ಸಿದ್ಧರಾಜು ಆಲಕೆರೆ

ಜಿಲ್ಲಾ ಕೇಂದ್ರ ಮಡಿಕೇರಿಯಿಂದ ಮೈಸೂರು ಮಾರ್ಗದಲ್ಲಿ 28 ಕಿ.ಮೀ ಕ್ರಮಿಸಿದರೆ, (ಕುಶಾಲನಗರ-ದಿಂದ ಮಡಿಕೇರಿ ಕಡೆ 3 ಕಿ.ಮೀ ದೂರ) ಹೆದ್ದಾರಿ ಪಕ್ಕದಲ್ಲೇ ನಿಸರ್ಗಧಾಮವಿದೆ. ತೂಗು ಸೇತುವೆ ಮೂಲಕ ನಿಸರ್ಗ ಧಾಮ ಪ್ರವೇಶಿಸಿದಂತೆ ಕಾನನದಲ್ಲಿನ ಹಲವಾರು ಜಾತಿಯ ಮರಗಳ ಬೊಡ್ಡೆಗಳು ಕಾಣಿಸುತ್ತವೆ. ಅಲ್ಲೇ ಈ ಬೊಡ್ಡೆಗಳಿಗೆ ಜೀವ ತುಂಬುವ ಕೆಲಸ ಕಲಾವಿದರಿಂದ ನಡೆದಿದೆ.

ನಿಸರ್ಗಧಾಮದ ಕಾನನದಲ್ಲಿನ ಹಲವು ಜಾತಿಯ ಮರಗಳ ಬೊಡ್ಡೆಗಳು ಜನಸಾಮಾನ್ಯರಿಗೆ ಮರದ ಸೌದೆಯಂತೆ ಕಂಡರೆ, ಕಲಾವಿದ ಆ ಬೊಡ್ಡೆಗಳಲ್ಲೇ ಸ್ತ್ರೀ-ಪುರುಷರ, ಪ್ರಾಣಿ, ಪಕ್ಷಿಗಳ, ಸರೀಸೃಪಗಳ ಆಕೃತಿಗಳನ್ನು ಅರಸುತ್ತಾನೆ. ಕಾಷ್ಠಕಲೆಯ ಈ ವಿಶಿಷ್ಟ ಕಲಾವಿದ ಥಾಮಸ್.

ಈತನ ಮೂಲ ಕೇರಳದ ಕಣ್ಣನೂರು ಸಮೀಪದ ಇರಿಚಿ ಗ್ರಾಮ. ಮೆಟ್ರಿಕ್‌ವರೆಗೆ ವ್ಯಾಸಂಗ ಮಾಡಿದ ಥಾಮಸ್, ಮನೆಯಿಂದ ಮುನಿಸಿಕೊಂಡು ಹೊಟ್ಟೆ-ಪಾಡಿಗಾಗಿ ಶ್ರೀಲಂಕಾ, ಅಂಡಮಾನ್- ನಿಕೊಬಾರ್, ಸಿಂಗಾಪುರ, ಮಲೇಷ್ಯಾ ಎಂದೆಲ್ಲ ತಿರುಗಾಡಿದವನು. ಕೊನೆಗೆ 30 ವರ್ಷಗಳ ಹಿಂದೆ ಕೊಡಗಿನ ಕುಶಾಲ-ನಗರದಲ್ಲಿ ನೆಲೆ ನಿಂತಾಗ ಜೀವನಾಧಾರ ಆದದ್ದು ಈ ಬೊಡ್ಡೆಗಳ ಕಲಾಕೃತಿಗಳು.

ಕುಶಾಲನಗರದಲ್ಲಿ ಕುಶಾಲ್ ಆರ್ಟ್ಸ್ ಹೆಸರಿನಲ್ಲಿ ಚಿತ್ರ ಬರೆಯುವುದು, ಗಾರೆ ಶಿಲ್ಪ ನಿರ್ಮಿಸುವ ಕಾಯಕ ಆರಂಭದಲ್ಲಿ ಕೈಗೊಂಡದ್ದು ಜೀವನಕ್ಕೆ ಭದ್ರತೆ ನೀಡಿತು. ಈಗ ನಿಸರ್ಗಧಾಮದ ಬೊಡ್ಡೆಗಳಲ್ಲಿ ಆನೆ, ಋಷಿ, ಹುಡುಗಿ, ಆಮೆ, ನರಿ, ಮೊಲ, ಗೊಸುಂಬೆ, ಜಿಂಕೆ, ಹುಲಿ, ಮೊಸಳೆ, ನವಿಲು, ವಿವಿಧ ಪಕ್ಷಿಗಳ ಚಿತ್ರಗಳು ಮೂಡಿ ಬಂದಿವೆ. ಈತನ ಕಾಷ್ಠಕಲೆಯ ಕರಾಮತ್ತು ಕುತೂಹಲ ಮೂಡಿಸುತ್ತದೆ.

